ಅವಕಾಶ ಕಲ್ಪಿಸಿದಲ್ಲಿ ಸರ್ಕಾರಕ್ಕೆ ಯಾವ ರೀತಿಯ ಹಣದ ಭಾರವೂ ಬರುವುದಿಲ್ಲ. ಈ ಅವಕಾಶ ಬರುತ್ತದೆ ಎಂದು ನಿರೀಕ್ಷಿಸಬಹುದೆ? ಇಷ್ಟು ದಿನಗಳವರೆಗೆ ಇಲಾಖೆ ಮತ್ತು ಸರ್ಕಾರ ಇವರುಗಳ ಬಗ್ಗೆ ಗಮನಹರಿಸದೇ ಈ ಅವಕಾಶವನ್ನು ಕಲ್ಪಿಸಲಿಲ್ಲವೇಕೆ? ಇನ್ನಾದರೂ ಇತ್ತ ಗಮನಹರಿಸಿ ಆದಷ್ಟು ಜಾಗ್ರತೆ ಅವಕಾಶ ಕಲ್ಪಿಸುವರೇ?

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರತಕ್ಕ ವಿಚಾರವನ್ನು ಮಾನ್ಯ ವ್ಯವಸಾಯ ಮತ್ತು ತೋಟಗಾರಿಕಾ ಇಲಾಖೆ ಸಚಿವರ ಗಮನಕ್ಕೆ ತರಲಾಗುವುದು.

೩) ಬೇಲೂರು ಚನ್ನಕೇಶವ ದೇವಸ್ಥಾನದ ಎದುರು ಇರುವ ರಸ್ತೆಯನ್ನು ೧೦೦ ಅಡಿ ರಸ್ತೆಯಾಗಿ ವಿಸ್ತರಿಸಿ ಹಾಸನ–ಚಿಕ್ಕಮಂಗಳೂರು ರಸ್ತೆಗೆ ಸೇರಿಸುವುದು

ಶ್ರೀ ಜಿ. ಹೆಚ್. ಲಕ್ಷ್ಮಣಯ್ಯ.—ಮಾನ್ಯ ಅಧ್ಯಕ್ಷರೇ, ಬೇಲೂರು ಶ್ರೀ ಚನ್ನಕೇಶವ ದೇವಸ್ಥಾನದ ಎದುರು ರಸ್ತೆ ೧೦೦ ಅಡಿ ರಸ್ತೆಯಾಗಿ ವಿಸ್ತರಿಸಿ, ಹಾಸನ, ಚಿಕ್ಕಮಂಗಳೂರು ರಸ್ತೆಗೆ ನೇರವಾಗಿ ಸೇರಿಸಲು ಮತ್ತು ಅಡ್ಡ ಬರುವ ಯಗಚಿ ನದಿಗೆ ಹೊಸ ಸೇತುವೆ ಕಟ್ಟಲು ಸರ್ವೆ ಮಾಡಿರುವುದು ನಿಜವೇ. ಇದಕ್ಕೆ ಜಪಾನ್ ದೇಶ ಪ್ರತ್ಯೇಕ ಹಣ ಒದಗಿಸುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಬೇಲೂರು ಚನ್ನಕೇಶವಸ್ವಾಮಿ ದೇವಸ್ಥಾನದ ಎದುರು ಇರುವ ರಸ್ತೆಯನ್ನು ೧೦೦ ಅಡಿ ರಸ್ತೆಯನ್ನಾಗಿ ಪರಿವರ್ತಿಸಿ, ಚಿಕ್ಕಮಂಗಳೂರು–ಹಾಸನ ರಸ್ತೆಗೆ ಸೇರಿಸತಕ್ಕ ಪ್ರಸ್ತಾವನೆ ಈಗಾಗಲೇ ಸರ್ಕಾರದ ಮುಂದೆ ಇದೆ. ಹಳೇಬೀಡು ಮತ್ತು ಬೇಲೂರು ರಸ್ತೆಗೆ ಜಪಾನ್ ಪ್ರವಾಸೋದ್ಯಮ ಯೋಜನೆಯೊಳಗೆ ತೆಗೆದುಕೊಳ್ಳತಕ್ಕ ಪ್ರಸ್ತಾವನೆಯನ್ನು ನಾವು ಹಾಕಿಕೊಂಡಿದ್ದೇವೆ. ಈ ಯೋಜನೆಯಲ್ಲಿ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

(iv) ಅಬಕಾರಿ ಹರಾಜಿನ ಬಾಕಿ ಹಣ

ಶ್ರೀ ಬಿ ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರ್ಕಾರದ ಅಬಕಾರಿ ಕಾಯಿದೆ ಅನ್ವಯ ಪ್ರತಿ ವರ್ಷದ ಆರಂಭದಲ್ಲಿ ಅಂದರೆ ಜಿಲ್ಲಾ ಮತ್ತು ತಾಲ್ಲೂಕುವಾರು ಅಬಕಾರಿ ಹರಾಜಿನಲ್ಲಿ ಹಿಂದಿನ ವರ್ಷದ ಒಂದು ತಿಂಗಳ ಕಿಸ್ತು ಮತ್ತು ಪೂರು ತಿಂಗಳ ಬ್ಯಾಂಕ್ ಗ್ಯಾರಂಟಿ, ಅಲ್ಲದೆ ಹಿಂದಿನ ಒಂದು ವರ್ಷದ ಆರ್ಥಿಕ ಸುಬತ್ತು (ಸಾಲ್ವನ್ಸ್) ಕೊಡಬೇಕಾಗಿದೆ. ಪ್ರಸಕ್ತ ಸಾಲಿನಲ್ಲಿ ಒಂದಕ್ಕೆ ಹತ್ತು ಹದಿನೈದು ಪಟ್ಟು ಕಿಸ್ತು ಜಾಸ್ತಿಯಾಗಿರುವ ಉದಾಹರಣೆಗಳೂ ಇರುವಾಗ ಕಡಿಮೆ ಇಡಗಂಟು, ಕಡಿಮೆ ಗ್ಯಾರಂಟಿ ಕೊಟ್ಟು ಗುತ್ತಿಗೆದಾರರು ಕಿಸ್ತು ಕಟ್ಟದೇ ಇರುವ ಸಂದರ್ಭದಲ್ಲಿ ಬಾಕಿ ಹಣಕ್ಕೆ ಸರಕಾರ ಯಾವ ಕ್ರಮ ತೆಗೆದುಕೊಳ್ಳುವುದು ಎಂದು ಶೀರ್ಮಾನಿಸಿದೆ ಎಂದು ಮಾನ್ಯ ಅಬಕಾರಿ ಮತ್ತು ಹಣಕಾಸು ಸಚಿವರನ್ನು ಸದನದ ಮೂಲಕ ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಬಿ. ಸ್ವಾಮಿರಾವ್ ಮತ್ತು ರವೀಂದ್ರನಾಥ ಬಾಬು ಅವರು ಎತ್ತಿದಂಥ ವಿಚಾರಗಳನ್ನು ಸನ್ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರ ಗಮನಕ್ಕೆ ತರುತ್ತೇನೆ.

(v) ಬಂಟ್ವಾಳ ತಾಲ್ಲೂಕಿನ ಬೆಂಜನಪದವು ಎಂಬಲ್ಲಿ ಕೈಗಾರಿಕಾ ಎಸ್ಟೇಟ್ ಪ್ರಾರಂಭ

ಶ್ರೀ ರಮಾನಾಥ ರೈ (ಬಂಟವಾಳ).—ಮಾನ್ಯ ಅಧ್ಯಕ್ಷರೇ, ಬಂಟ್ವಾಳ ತಾಲ್ಲೂಕು ಬೆಂಜದಪದವು ಎಂಬಲ್ಲಿ ಕೈಗಾರಿಕಾ ಎಸ್ಟೇಟ್ ಪ್ರಾರಂಭ ಮಾಡುವ ಬಗ್ಗೆ ಸರ್ಕಾರದ ಮುಂದೆ ನಮ್ಮ ಮನವಿ ಇದೆ. ಬಂಟ್ವಾಳ ತಾಲ್ಲೂಕು ಮಂಗಳೂರು ನಗರಕ್ಕೆ ಬಹಳ ಹತ್ತಿರವಾದ ಸ್ಥಳವಾಗಿದ್ದು ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕು ಎಂದು ಘೋಷಣೆ ಮಾಡಿರುವುದರಿಂದ ಮಂಗಳೂರು ತಾಲ್ಲೂಕನ್ನು ಕೈಗಾರಿಕೆಯಲ್ಲಿ ಮುಂದುವರಿದ ತಾಲ್ಲೂಕು ಎಂದು ಈಗಾಗಲೇ ತೀರ್ಮಾನಿಸಲಾಗಿರುವುದರಿಂದ ಬಹಳಷ್ಟು ಉದ್ಯಮಿಗಳು ಬಂಟ್ವಾಳದಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡಲು ಮುಂದೆ ಬರುತ್ತಿದ್ದಾರೆ. ಆದುದರಿಂದ ಬಂಟ್ವಾಳ ತಾಲ್ಲೂಕಿನ ಬೆಂಜನಪದವು ಎಂಬಲ್ಲಿ ಕೈಗಾರಿಕಾ ಎಸ್ಟೇಟ್ ಪ್ರಾರಂಭ ಮಾಡುವ ಬಗ್ಗೆ ತಮ್ಮ ಮೂಲಕ ಮಾನ್ಯ ಕೈಗಾರಿಕಾ ಸಚಿವರನ್ನು ಏನಂತಿ ಮಾಡಿಕೊಳ್ಳುತ್ತಿದ್ದೇನೆ.